**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ**

**ಸಿ.ಸಿ. ನಂ. 592/2025 ಫ್ರಾ.ಸಾ - 1**

**ಚಾ.ಸಾ – 1**

**ದಿನಾಂಕಃ 16.06.2026. ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಅಕ್ಷಿತಾ |
| ತಂದೆಯ ಹೆಸರು | : | ಮೋಹನ |
| ವಯಸ್ಸು | : | 20 ವರ್ಷ |
| ಉದ್ಯೋಗ | : | Finance ನಲ್ಲಿ ಕೆಲಸ |
| ವಾಸ ಸ್ಥಳ | : | ಚೆನ್ನಂಗೊಲ್ಲಿ ಗ್ರಾಮ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ಆರೋಪಿ ನನ್ನ ಅಣ್ಣ. ಚಾಸಾ 2 ಮತ್ತು 3 ನನ್ನ ತಂದೆ ತಾಯಿ. ಈ ಪ್ರಕರಣದಲ್ಲಿ ನಮ್ಮಗಳ ನಡುವೆ ಯಾವುದೇ ಗಲಾಟೆ ಆಗಿಲ್ಲ, ನನ್ನ ತಂದೆ ತಾಯಿಗೆ ನನ್ನ ಅಣ್ಣನಿಂದ ಯಾವುದೇ ಹಲ್ಲೆ ಆಗಿಲ್ಲ, ನನ್ನ ತಂದೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ, ನನ್ನ ಸಮಕ್ಷಮ ಮಹಜರ್ ಮಾಡಿಲ್ಲ. ಯಾವುದೇ ವಸ್ತುವನ್ನು ನನ್ನ ಸಮಕ್ಷಮ ಅಮಾನತುಪಡಿಸಿಕೊಂಡಿಲ್ಲ.

ಸಾಕ್ಷಿಯು ದೂರು ಮತ್ತು ಮಹಜರ್ ಅನ್ನು ನೋಡಿ ಅವುಗಳನ್ನು ನಿ ಪಿ 1 ಮತ್ತು 2 ಎಂದು, ಸಹಿಗಳನ್ನು ನಿ ಪಿ 1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ಅವುಗಳಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕತ್ತಿಯನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-**

ದಿ. 01.03.2025 ರಂದು ಸಂಜೆ 04.30 ಕ್ಕೆ ನಾನು ನಮ್ಮ ವಾಸದ

ಮನೆಯಲ್ಲಿರುವಾಗ ಚಾಸಾ 2 ರವರು ಮಧ್ಯಪಾನ ಮಾಡಿಕೊಂಡು ಬಂದು ಚಾಸಾ 3 ರವರೊಂದಿಗೆ ಗಲಾಟೆ ಮಾಡಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿ ನನ್ನ ಅಣ್ಣ ಮನೆಯ ಮುಂದೆ ಸೌದೆ ಕಡಿಯುತ್ತಿದ್ದರು ಮನೆ ಒಳಗಡೆ ಬಂದು ಚಾಸಾ 2 ನನ್ನ ತಂದೆ ಜೊತೆ ಜಗಳ ಮಾಡಿ ಅವನ ಕೈಯಲ್ಲಿದ್ದ ನ್ಯಾಯಾಲಯದ ಮುಂದೆ ಇರುವ ಮಂಡೆ ಕತ್ತಿಯಿಂದ ಚಾಸಾ 2 ನನ್ನ ತಂದೆಯವರ ಎದೆಯ ಭಾಗಕ್ಕೆ ಎಡ ತೋಳಿಗೆ ಮತ್ತು ಹೊಟ್ಟೆಯ ಭಾಗಕ್ಕೆ ಹಲ್ಲೆ ಮಾಡಿ ತೀವ್ರ ಸ್ವರೂಪದ ಗಾಯ ಪಡಿಸಿದರು ಎಂದರೆ ಸರಿಯಲ್ಲ. ನಂತರ ನನ್ನ ತಂದೆಯನ್ನು ಲೋಪ ಮುದ್ರಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದೆವು ಎಂದರೆ ಸರಿಯಲ್ಲ. ನನ್ನ ತಂದೆ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಂತರ ಗೋಣಿಕೊಪ್ಪ ಪೊ. ಠಾಣೆಗೆ ಹೋಗಿ ಆರೋಪಿ ನನ್ನ ಅಣ್ಣನ ವಿರುದ್ಧ ದೂರು ದಾಖಲಿಸಿದೆ ಎಂದರೆ ಸರಿಯಲ್ಲ.

ದಿ. 02.03.2025 ರಂದು ಪೊಲೀಸರು ನಮ್ಮ ಮನೆ ಹತ್ತಿರ ಬಂದು ಸಂಜೆ 05.00 ರಿಂದ 06.00 ಗಂಟೆ ತನಕ ನಾನು ತೋರಿಸಿಕೊಟ್ಟಂತೆ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿ, ಸ್ಥಳದಲ್ಲಿದ್ದ ಕೃತ್ಯಕ್ಕೆ ಉಪಯೋಗಿಸಿದ ನ್ಯಾಯಾಲಯದ ಮುಂದೆ ಇರುವ ಮಂಡೆ ಕತ್ತಿಯನ್ನು ವಶಕ್ಕೆ ಪಡೆದರು ಎಂದರೆ ಸರಿಯಲ್ಲ. ಮಹಜರ್ ಸಮಯದಲ್ಲಿ ಫೋಟೋ ತೆಗೆದರು ಎಂದರೆ ಸರಿಯಲ್ಲ. ಆರೋಪಿ ನನ್ನ ಅಣ್ಣನಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಿ. ಜಿ. ಎಂ. ವಕೀಲರಿಂದಃ</u>** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**Sd/-**

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ